VIDYAVARDHAKA LAW COLLEGE LIBRARY MYSURU

**0201/2046/0521**

# Second Semester 3 Year LL.B./VI Semester 5 Year B.A.LL.B.(Maj.Min.System)/B.Com.LL.B./B.B.A.LL.B./V Semester 5 Year B.A.LL.B./B.B.A.LL.B. Examination, March/April 2023 (Dec. 2022)
# CONTRACT – II

Duration : 3 Hours — Max. Marks : 100

**Instructions :** 
1. **Answer Q. No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answer should be written either in English or Kannada completely.**

Q. No. 1. Define contract of indemnity and guarantee. State the distinctions between contract of indemnity and contract of guarantee. State the essentials of both. Marks : 16

ನಷ್ಟಭರ್ತಿ ಕರಾರು ಮತ್ತು ಜಾಮೀನುದಾರಿಕೆಯ ಕರಾರುಗಳನ್ನು ವ್ಯಾಖ್ಯಾನಿಸಿ. ನಷ್ಟಭರ್ತಿ ಕರಾರು ಮತ್ತು ಜಾಮೀನುದಾರಿಕೆ ಕರಾರುಗಳ ನಡುವಿನ ವ್ಯತ್ಯಾಸಗಳನ್ನು ಹೇಳಿರಿ ಮತ್ತು ಇವೆರಡರ ಅವಶ್ಯಕ ಅಂಶಗಳನ್ನು ತಿಳಿಸಿ.

Q. No. 2. Define pledge. Explain the rights and duties of pledge. Marks : 16

ಗಿರಿವಿಯನ್ನು ವ್ಯಾಖ್ಯಾನಿಸಿ. ಗಿರಿವಿದಾರನ ಹಕ್ಕು ಮತ್ತು ಕರ್ತವ್ಯಗಳನ್ನು ವಿವರಿಸಿ.

Q. No. 3. What is agency ? Discuss the maxim "Delegatus non potest delegare" under agency. Marks : 16

ಕಾರ್ಯಭಾರ ಎಂದರೇನು ? ಕಾರ್ಯಭಾರದಡಿಯಲ್ಲಿ ''ಒಬ್ಬನು ತನ್ನ ಅಧಿಕಾರವನ್ನು ಇನ್ನೊಬ್ಬನಿಗೆ ವಹಿಸಿಕೊಡಲಾರ'' ಎಂಬ ನಿಯಮವನ್ನು ಚರ್ಚಿಸಿರಿ.

Q. No. 4. Explain the different grounds on which a firm is dissolved by the order of a Court. Marks : 16

ನ್ಯಾಯಾಲಯದ ಆದೇಶದ ಮೇರೆಗೆ ಒಂದು ಪಾಲುದಾರಿಕೆ ಸಂಸ್ಥೆಯನ್ನು ವಿಘಟಿಸುವ ವಿವಿಧ ಆಧಾರಗಳನ್ನು ವಿವರಿಸಿ.

Q. No. 5. Define contract of sale and distinguish contract of sale from an agreement to sell. Marks : 16

ಮಾರಾಟದ ಕರಾರನ್ನು ವ್ಯಾಖ್ಯಾನಿಸಿ ಮತ್ತು ಮಾರಾಟದ ಕರಾರು ಮತ್ತು ಮಾರಾಟದ ಒಪ್ಪಂದಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಿ.

Q. No. 6. Explain condition and warranty. Write the difference between them. Marks : 16

ಷರತ್ತು ಮತ್ತು ಭರವಸೆಯನ್ನು ವಿವರಿಸಿರಿ. ಅವುಗಳ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

Q. No. 7. Explain the remedies available to a seller and buyer for breach of a contract of sale. Marks : 16

ಮಾರಾಟಗಾರ ಮತ್ತು ಕೊಳ್ಳುವವನಿಗೆ ಒಪ್ಪಂದ ಉಲ್ಲಂಘನೆ ಸಂದರ್ಭದಲ್ಲಿ ಸಿಗುವಂತಹ ಪರಿಹಾರಗಳನ್ನು ವಿವರಿಸಿರಿ.

Q. No. 8. Write short notes on **any two** of the following : Marks : 2×8=16

ಈ ಕೆಳಗಿನ ಯಾವುದಾದರೂ **ಎರಡರ** ಮೇಲೆ ಟಿಪ್ಪಣಿ ಬರೆಯಿರಿ :

(a) Continuing guarantee

ನಿರಂತರ ಜಾಮೀನು

(b) Doctrine of Caveat Emptor

ಕೊಳ್ಳುವವನೇ ಎಚ್ಚರ ಸಿದ್ಧಾಂತ

(c) Undisclosed Principal.

ಅಪ್ರಕಟಿತ ಯಜಮಾನ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಗೆಹರಿಸಿ :

(a) 'R' purchased a motor car from 'D' and used the same for several months. 'D' had no title to the car and therefore 'R' was compelled to give it up to the true owner. 'R' sued 'D' to recover back the price which he had already paid. Decide.

'ಆರ್' ಎಂಬವನು 'ಡಿ' ಯ ಕೈಯಿಂದ ಒಂದು ಕಾರನ್ನು ಖರೀದಿಸುತ್ತಾನೆ. ಅನೇಕ ತಿಂಗಳ ಸಮಯ ಅದನ್ನು 'ಆರ್' ಉಪಯೋಗಿಸುತ್ತಾನೆ. 'ಡಿ' ಗೆ ಆ ಕಾರಿನ ಮೇಲೆ ಮಾಲಿಕತ್ವ ಇರುವುದಿಲ್ಲ ಆದ್ದರಿಂದ 'ಆರ್' ಅದನ್ನು ನಿಜವಾದ ಒಡೆಯನಿಗೆ ಕೊಡಬೇಕಾಗುತ್ತದೆ. ಈಗ 'ಆರ್' 'ಡಿ' ಯ ವಿರುದ್ಧ ಅವನು ನೀಡಿದ ಹಣವನ್ನು ವಸೂಲಿ ಮಾಡಲು ಒಂದು ದಾವೆಯನ್ನು ಹೂಡುತ್ತಾನೆ. ನಿರ್ಧರಿಸಿ.

(b) ‘A’ advances to ‘B’ a minor, Rs 1,00,000/- on the guarantee of ‘C’. ‘A’ on demand for repayment from ‘B’. ‘B’ refuses to pay on the ground of his minority. Can ‘A’ recover the amount from ‘C’ ? Decide.

‘ಅ’ ಎಂಬುವವನು ‘ಬ’ ಎಂಬ ಅಪ್ರಾಪ್ತ ವಯಸ್ಕನಿಗೆ ಒಂದು ಲಕ್ಷ ರೂಪಾಯಿಗಳನ್ನು ಮುಂಗಡ ಸಾಲವಾಗಿ ನೀಡಿರುತ್ತಾನೆ. ಅದಕ್ಕೆ ‘ಸ’ ನು ಜಾಮೀನುದಾರನಾಗಿರುತ್ತಾನೆ. ‘ಅ’ ನು ಹಣ ಮರುಪಾವತಿಗೆ ಬೇಡಿಕೆ ಮಾಡಿದಾಗ ‘ಬ’ ನು ತಾನು ಅಪ್ರಾಪ್ತ ವಯಸ್ಕ ಎಂಬ ಕಾರಣದಿಂದ ಮರುಪಾವತಿಸಲು ನಿರಾಕರಿಸುತ್ತಾನೆ. ‘ಅ’ ನು ‘ಸ’ ನಿಂದ ಹಣ ವಸೂಲು ಮಾಡಬಹುದೇ ? ನಿರ್ಣಯಿಸಿ.

(c) ‘A’ ‘B’ and ‘C’ are partners of a partnership firm. ‘C’ who is an active partner retires without giving public notice, ‘X’ supplies the goods to the firm after ‘C’ s retirement. Advise ‘X’ as the recovery of amount of the goods supplied.

‘ಅ’ ‘ಬ’ ಮತ್ತು ‘ಕ’ ಪಾಲುಗಾರಿಕೆ ಸಂಸ್ಥೆಯೊಂದರ ಪಾಲುದಾರರು. ಪ್ರವರ್ತಕ ಪಾಲುಗಾರನಾಗಿದ್ದ ‘ಕ’ ನು ಸಾರ್ವಜನಿಕ ಸೂಚನೆ ಕೊಡದೆ ಸಂಸ್ಥೆಯಿಂದ ನಿವೃತ್ತಿ ಹೊಂದುತ್ತಾನೆ. ‘ಕ’ ನ ನಿವೃತ್ತಿಯ ತದನಂತರ ‘ಕ್ಷ’ ನು ಸಂಸ್ಥೆಗೆ ಸರಕುಗಳನ್ನು ಪೂರೈಸುತ್ತಾನೆ. ‘ಕ್ಷ’ ನು ಸರಕುಗಳನ್ನು ಪೂರೈಸಿದ ಹಣವನ್ನು ವಸೂಲಿ ಮಾಡಿಕೊಳ್ಳುವುದರ ಬಗ್ಗೆ ಸಲಹೆ ನೀಡಿ.

---